**<u>ಸಾಕ್ಷಿಯನ್ನು ದಿನಾಂಕ: 20.06.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುರೆದ ಪಾಟೀಸವಾಲುಃ ಶ್ರೀ ಎಂ.ಎಲ್.ಎಸ್. ವಕೀಲರಿಂದ</u>**

**3.** ನನ್ನ ತಾತ ರಂಗದಾಸಪ್ಪನವರಿಗೆ ಮಾರಕ್ಕ, ರಾಮಯ್ಯ, ನಾಗಪ್ಪ ಹಾಗೂ ನಿಂಗಮ್ಮ ಎಂಬ 4 ಜನ ಮಕ್ಕಳು. 1 ರಿಂದ 4 ನೇ ಪ್ರತಿವಾದಿಗಳು ನಮ್ಮ ತಾಯಿಯ ತಮ್ಮನ ಮಕ್ಕಳು ಎಂದರೆ ಸರಿ. ಬುಡ್ಡೇನಹಳ್ಳಿ ಗ್ರಾಮದಲ್ಲಿನ ಜಮೀನುಗಳನ್ನು ಮಾರಾಟ ಮಾಡಿ ನಮ್ಮ ತಾಯಿಯ ಹೆಸರಿಗೆ ಮುದ್ದರಂಗಮ್ಮನವರ ಕಡೆಯಿಂದ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ. ನಮ್ಮ ತಾತ ರಂಗದಾಸಪ್ಪ ಹಾಗೂ ನನ್ನ ತಾಯಿ ಸೇರಿಕೊಂಡು 1968 ಕ್ಕಿಂತ ಮೊದಲೇ ದಾವಾ ಆಸ್ತಿಗಳನ್ನು ಮುದ್ದರಂಗಮ್ಮನವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ದಿಃ19.01.1968 ದಾವಾ ಆಸ್ತಿಗಳನ್ನು ಮುದ್ದರಂಗಮ್ಮನವರಿಂದ ಮರು ಕ್ರಯಕ್ಕೆ ಪಡೆದಿರುತ್ತೇವೆ ಎಂದರೆ ಸರಿ. ಆ ಕಾಲಕ್ಕೆ ನಮ್ಮ ತಾತನಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಆ ಕಾರಣ ನನ್ನ ತಾತನನ್ನು ಕುರುಡು ರಂಗದಾಸಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ.

**4.** ನನ್ನ ತಾಯಿ ನನ್ನ ತಾತನ ಹೆಸರನ್ನು ಕ್ರಯ ಪತ್ರದಲ್ಲಿ ಕಾಣಿಸದೇ ಅವರ ಹೆಸರನ್ನು ಮಾತ್ರ ಕಾಣಿಸಿಕೊಂಡು ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ16.01.1973 ರಂದು ನನ್ನ ತಾಯಿಯು 1 ರಿಂದ 4 ನೇ ಪ್ರತಿವಾದಿಗಳ ತಂದೆಯ ಹೆಸರಿಗೆ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಹಳೆ ಸರ್ವೆ ನಂ. 97 ಎಂದರೆ ಸರಿ. ಸದರಿ ಸರ್ವೆ ನಂಬರ್ ಪೋಡಾಗಿ 84 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿಗೆ ಕ್ರಯ ಪತ್ರದಲ್ಲಿ ಬಂದ 5 ಎಕರೆ ಜಮೀನಿನ ಪೈಕಿ ದಕ್ಷಿಣ ಭಾಗದಲ್ಲಿ 2 ಎಕರೆ 20 ಗುಂಟೆ ಜಮೀನನ್ನು 300/- ರೂ.ಗಳಿಗೆ 1 ರಿಂದ 4 ನೇ ಪ್ರತಿವಾದಿಗಳ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 2 ಎಕರೆ 20 ಗುಂಟೆ ಜಮೀನಿನಲ್ಲಿ 1973 ನೇ ಸಾಲಿನಿಂದ ಇಲ್ಲಿಯವರೆಗೂ 1 ರಿಂದ 4 ನೇ ಪ್ರತಿವಾದಿಗಳ ಕುಟುಂಬದವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 97 ರಲ್ಲಿ ಉಳಿದ 2 ಎಕರೆ 20 ಗುಂಟೆ ಜಮೀನಿನನ್ನು ನಮ್ಮ ತಾಯಿ ಮತ್ತು ನಾನು ಸೇರಿ ನನ್ನ ತಾತನಾದ ರಂಗದಾಸಯ್ಯನವರಿಗೆ ದಿಃ18.01.1981 ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಕ್ಕೆ ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಹಾಗೂ ಸಾಕ್ಷಿದಾರರಾಗಿ ಹೆ.ಕೆ. ಉಗ್ರಪ್ಪ, ಲಿಂಗಯ್ಯ, ರೇವಣ್ಣ

ಹಾಗೂ ಕೆ. ಲಿಂಗಯ್ಯರವರು ಸಹಿಗಳನ್ನು ಹಾಗೂ ಪತ್ರಬರಹಗಾರರಾಗಿ ಕೆ.ಆರ್. ಸುಬ್ಬರಾವ್‌ರವರು ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 2 ಎಕರೆ 20 ಗುಂಟೆ ಜಮೀನಿನಲ್ಲಿ 1981 ನೇ ಸಾಲಿನಿಂದ 1 ರಿಂದ 4 ನೇ ಪ್ರತಿವಾದಿಗಳ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಂತರ ಒಟ್ಟು 5 ಎಕರೆ ಜಮೀನಿನನ್ನು ನಾಗಪ್ಪನ ಮಕ್ಕಳು ವಿಭಾಗವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**5.** 1 ರಿಂದ 4 ನೇ ಪ್ರತಿವಾದಿಗಳ ತಂದೆ ನಾಗಪ್ಪ ಹಾಗೂ ಅವರ ಅಪ್ರಾಪ್ತ ಮಕ್ಕಳಾದ 2 ರಿಂದ 4 ನೇ ಪ್ರತಿವಾದಿಗಳ ಪರವಾಗಿ ನಾಗಪ್ಪನವರೇ 2 ಎಕರೆ 20 ಗುಂಟೆ ಆಸ್ತಿಯನ್ನು ದಿಃ07.05.1993 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ07.05.1993 5 ನೇ ಪ್ರತಿವಾದಿಯು 2 ಎಕರೆ 20 ಗುಂಟೆ ಆಸ್ತಿಯ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಿಂದ 5 ನಮಗೆ ಸಂಬಂಧಿಸಿದ ದಾಖಲೆಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಾಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**Sd/-**
**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**